# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ - 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) **PM-USHA (MERU)**

# 96ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2025ನೇ ಸಾಲಿನ 8ನೇ ಸಭೆಯ ನಡಾವಳಿಗಳು

**ದಿನಾಂಕ** : ಮಂಗಳವಾರ, 30-09-2025

**ಸಮಯ** : ಪೂರ್ವಾಹ್ನ 11 : 00 ಘಂಟೆ

**ಸ್ಥಳ** : ಸಿಂಡಿಕೇಟ್ ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ - 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **96ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2025ನೇ ಸಾಲಿನ 8ನೇ ಸಭೆಯನ್ನು** ದಿನಾಂಕ 30 ಸೆಪ್ಟೆಂಬರ್ 2025 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಸಿ. ಎಂ. ತ್ಯಾಗರಾಜ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಡಾ. ಸುಷ್ಮಾ.ಆರ್. | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಶ್ರೀ ಆರ್. ಎಂ. ದೇವರಡ್ಡಿ | ಸದಸ್ಯರು |
| 6. | ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 7. | ಶ್ರೀ ಎಸ್. ಎ. ದೇಶಮುಖ್ | ಸದಸ್ಯರು |
| 8. | ಶ್ರೀಮತಿ ಎಸ್. ಬಿ.ಢಂಗ | ಸದಸ್ಯರು |
| 9. | ಶ್ರೀ. ರಫೀ ಭಂಡಾರಿ | ಸದಸ್ಯರು |
| 10. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 11. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 12. | ಡಾ. ಮಹಾಂತೇಶ ಕಂಬಾರ | ಸದಸ್ಯರು |
| 13. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 14. | ಪ್ರೊ.(ಶ್ರೀಮತಿ) ವ್ಹಿ ಎಸ್. ಶಿಗೇಹಳ್ಳಿ | ಸದಸ್ಯರು |
| 15. | ಶ್ರೀಮತಿ ಎಂ.ಎ. ಸಪ್ನ, ಕೆ.ಎ.ಎ.ಎಸ್.(ಹಣಕಾಸು ಅಧಿಕಾರಿಗಳು) | ವಿಶೇಷ ಆಹ್ವಾನಿತರು |
| 16. | ಪ್ರೊ. ಡಿ. ಎನ್. ಪಾಟೀಲ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್. | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 6. | ಡಾ. ಕಾವೇರಿ ಎಚ್.ಎಂ. | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ 30 ಸೆಪ್ಟೆಂಬರ್ 2025 ರಂದು ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27) (28) (2)
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 18.09.2025.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 18.09.2025.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 96ನೇ ಹಾಗೂ 2025 ನೇ ಸಾಲಿನ 8 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 30.09.2025 ರಂದು ಪೂರ್ವಾಹ್ನ 11.00 ಘಂಟೆಗೆ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಡೀನ ಗುಂಪಿನಿಂದ ಸದಸ್ಯರಾಗಿ ಹೊಸದಾಗಿ ನಾಮನಿರ್ದೇಶನಗೊಂಡ ಡಾ. ಸುಷ್ಮಾಆರ್., ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರಿಗೆ ಹೂಗುಚ್ಛ ನೀಡಿ ಸಭೆಗೆ ಬರಮಾಡಿಕೊಳ್ಳಲಾಯಿತು. ತದನಂತರ, ಕುಲಸಚಿವರು ಸಭೆಯ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಸರ್ಕಾರದಿಂದ PM-USHA ಯೋಜನೆಯಡಿಯಲ್ಲಿ 100 ಕೋಟಿ ರೂಪಾಯಿಗಳು ಮಂಜೂರಾಗಿದ್ದು ಅದರಲ್ಲಿ ಅಂದಾಜು 4.20 ಕೋಟಿ ರೂಪಾಯಿಗಳ ಹಣದಲ್ಲಿ UPS, System, Battery ಹೀಗೆ ವಿವಿಧ ಸಾಮಗ್ರಿಗಳನ್ನು ಖರೀದಿಸಿ ಹೊಸದಾಗಿ ಲ್ಯಾಬ್‌ನ್ನು ನಿರ್ಮಿಸಲಾಗಿದ್ದು, ಸದರಿ ಲ್ಯಾಬ್‌ನ್ನು ಸಿಂಡಿಕೇಟ್ ಉದ್ಘಾಟಿಸಿದ ನಂತರ ಸಭೆಯನ್ನು ಪ್ರಾರಂಭಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ವಿಜಯದಶಮಿ ಹಬ್ಬದ ಶುಭಾಶಯ ಕೋರಿ, ಅಕ್ಟೋಬರ್ 04, 2025 ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಮಹತ್ವದ ದಿನವಾಗಿರುತ್ತದೆ. ಶ್ರೀಮತಿ ಆಯ್. ಎಸ್. ಯಾದವಾಡ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ರಾಮದುರ್ಗ, ಬೆಳಗಾವಿ ಇಲ್ಲಿ ದಿನಾಂಕ: 04.10.2025 ರಿಂದ 07.10.2025 ರವರೆಗೆ ಒಟ್ಟು 04 ದಿನಗಳವರೆಗೆ ದಕ್ಷಿಣ ಭಾರತದ ಅಂತರ ವಿಶ್ವವಿದ್ಯಾಲಯಗಳ ಕಬಡ್ಡಿ ಕ್ರೀಡಾಕೂಟ ಜರುಗುತ್ತಿದ್ದು ಕ್ರೀಡಾಪಟುಗಳು, ರೇಫರಿ, ಆಯೋಜಕರು, ಪೋಷಕರು ಇವರುಗಳನ್ನು ಒಳಗೊಂಡು ಸುಮಾರು 7500 ಜನರು ಉಪಸ್ಥಿತರಿರುವರು. ನವೆಂಬರ್-2025 ರಲ್ಲಿ ದಕ್ಷಿಣ ಭಾರತ ಅಥ್ಲೇಟಿಕ್ಸ್ ಕ್ರೀಡಾಕೂಟವನ್ನು ಆಯೋಜಿಸಲು ವಿಶ್ವವಿದ್ಯಾಲಯಕ್ಕೆ ಅವಕಾಶ ಒದಗಿ ಬಂದಿದ್ದು ಸಮಯದ ಅಭಾವವಿರುವುದರಿಂದ ಫೆಬ್ರುವರಿ-2026 ರವರೆಗೆ ದಿನಾಂಕವನ್ನು ಮರುಪರಾಮರ್ಶಿಸಲು ವಿನಂತಿಸಲಾಗಿದೆ. ಇಂತಹ ಕ್ರೀಡೆಗಳ ಆಯೋಜನೆಯಿಂದಾಗಿ ರಾಣಿ

ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ದೊರೆಯುವುದು ಹಾಗೂ ನ್ಯಾಕ್‌ನಲ್ಲಿ ಉತ್ತಮ ದರ್ಜೆಯ ಅಂಕಗಳನ್ನು ಪಡೆಯಲು ಸಹಕಾರಿಯಾಗುವುದು ಎಂದರು. ಪಿ.ಎಂ-ಉಷಾ(ಮೇರು) ಯೋಜನೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಒಳಗೊಂಡು ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ರೂ.100 ಕೋಟಿ ಅನುದಾನ ಮಂಜೂರಾಗಿದ್ದು ಅನುದಾನದ ಬಳಕೆ ಕುರಿತು ಚರ್ಚಿಸಲು ಇತ್ತೀಚೆಗೆ ಯುಜಿಸಿ ಸಮಿತಿಯ ಜಂಟಿ ಕಾರ್ಯದರ್ಶಿಗಳು ಬೆಂಗಳೂರಿನಲ್ಲಿ ಸಭೆಯನ್ನು ಆಯೋಜಿಸಿದ್ದರು. ಸದರಿ ಸಭೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಾಧನೆ ಮತ್ತು ಪ್ರಗತಿಯನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲಾಗಿದೆ. ಈ ಕುರಿತಂತೆ ಮಾನ್ಯರು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ. ವಿಶೇಷವಾಗಿ ವಿಜ್ಞಾನ ಸಿಟಿ(Science City) ಪ್ರಾರಂಭಿಸಲಿರುವ ಪ್ರಸ್ತಾವನೆಯನ್ನು ಶ್ಲಾಘಿಸಿ, ಕಡುಬಡವರು ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಇದು ದೊಡ್ಡ ಶಕ್ತಿಯಾಗಲಿದೆ. ಮುಂದಿನ ದಿನಗಳಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು ಹಾಗೂ Emerging and Progressive University ಎಂಬ ಮನ್ನಣೆ ನೀಡಲಾಗುವುದು ಎಂದು ತಿಳಿಸಿರುತ್ತಾರೆ. ಎರಡನೇಯದಾಗಿ, ಕರ್ನಾಟಕ ಎನ್.ಸಿ.ಸಿ ಬಟಾಲಿಯನ್ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಕ್ಕೆ 106 ವಿದ್ಯಾರ್ಥಿಗಳ ಎನ್.ಸಿ.ಸಿ ಆರ್ಮಿ ಯುನಿಟ್ ಮಂಜೂರು ಮಾಡಿರುವುದಕ್ಕೆ ಕುಲಪತಿಗಳು ಹರ್ಷ ವ್ಯಕ್ತಪಡಿಸಿ, ಈ ಯಶಸ್ಸಿಗೆ ಕಾರಣರಾದ ಕುಲಸಚಿವರು ಕಾರ್ಯವೈಖರಿಯನ್ನು ಶ್ಲಾಘಿಸಿ ಮತ್ತು ಎಲ್ಲ ಸದಸ್ಯರುಗಳು ನೀಡಿರುವ ಸಹಕಾರ ಮತ್ತು ಪ್ರೋತ್ಸಾಹವನ್ನು ಸ್ಮರಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೀರೆಬಾಗೇವಾಡಿ ಹೊಸ ಆವರಣದಲ್ಲಿ ಪಿ.ಎಂ-ಉಷಾ(ಮೇರು) ವಿವಿಧ ಕಟ್ಟಡಗಳ ಹಾಗೂ ರಾಷ್ಟ್ರೀಯ ಹೆದ್ದಾರಿಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮವು 04 ಅಕ್ಟೋಬರ್ 2025 ರಂದು ಜರುಗಲಿದ್ದು ಶ್ರೀ ಸಿದ್ಧರಾಮಯ್ಯ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಹಾಗೂ ಡಾ. ಎಂ.ಸಿ. ಸುಧಾಕರ, ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಶ್ರೀ ಸತೀಶ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವರು, ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಅಂಗವಿಕಲರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು, ಎಲ್ಲಾ ಸಂಸದರು, ಶಾಸಕರು, ಜನಪ್ರತಿನಿಧಿಗಳು ಕೂಡ ಉಪಸ್ಥಿತರಿರುವರು. ಸದರಿ ಕಾರ್ಯಕ್ರಮಕ್ಕೆ ಎಲ್ಲ ಸದಸ್ಯರು ಭಾಗಿಯಾಗಲು ಆಹ್ವಾನಿಸಿದರು ಹಾಗೂ ಸನ್ಮಾನ್ಯ ಮಂತ್ರಿಗಳು ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಲಾಗಿರುವ E-VIDYA App, RCU-FESMA ಯೋಜನೆಗಳ ಕುರಿತು ಪ್ರಶಂಸೆ ವ್ಯಕ್ತಪಡಿಸಿರುವ ಮಾಹಿತಿಯನ್ನು ನೀಡಿದರು. ವಿಶ್ವವಿದ್ಯಾಲಯದ ಘಟಿಕೋತ್ಸವವನ್ನು ನವೆಂಬರ್ 2025 ನಲ್ಲಿ ನಿಗದಿಪಡಿಸಲು ಗೌರವಾನ್ವಿತ ರಾಜ್ಯಪಾಲರು ತಿಳಿಸಿದ್ದು ಹಿರಿಯ ರಾಜಕಾರಣಿಗಳಾದ ಶ್ರೀ ಶಶಿ ತರೂರ ಹಾಗೂ ಶ್ರೀಮತಿ ಮೀರಾ ಕುಮಾರ್ ಇವರುಗಳನ್ನು ಆಹ್ವಾನಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂಬ ಮಾಹಿತಿಯನ್ನು ಸಭೆಗೆ ಕುಲಪತಿಗಳು ನೀಡಿದರು.

ತದನಂತರ, ಕುಲಸಚಿವರು ಮತ್ತೊಮ್ಮೆ ಸ್ವಾಗತಿಸಿ ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಲಾಯಿತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 96ನೇ ಹಾಗೂ 2025 ನೇ ಸಾಲಿನ 8ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 30-09-2025 ರಂದು ಕೈಗೊಂಡ ತೀರ್ಮಾನಗಳು.

<table>
<tr><th></th><th>ಸಂಖ್ಯೆ</th><th>ಕಾರ್ಯಸೂಚಿ ವಿವರ ಹಾಗೂ ತೀರ್ಮಾನಗಳು</th></tr>
<tr><td>01</td><td>2025/09/01</td><td>ದಿನಾಂಕ: 12.08.2025 ರಂದು ಜರುಗಿದ ಸಭೆಯ ಗೊತ್ತುವಳಿ ಹಾಗೂ ಅನುಪಾಲನಾ ವರದಿಯನ್ನು ಸಭೆ ಮುಂದೆ ಮಂಡಿಸುವುದು.</td></tr>
<tr><td></td><td>ತೀರ್ಮಾನ</td><td>ದಿನಾಂಕ: 12.08.2025 ರಂದು ಜರುಗಿದ ಸಭೆಯ ಗೊತ್ತುವಳಿ ಹಾಗೂ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.</td></tr>
<tr><td>02</td><td>2025/09/02</td><td>ಪ್ರೊ. ವ್ಹಿ ಎಫ್. ನಾಗಣ್ಣವರ, ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಪ್ರೊ. ವ್ಹಿ ಎಫ್. ನಾಗಣ್ಣವರ, ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರಿಗೆ Central University of Jharkhand, Village-Cheri-Manatu, P.O- Kamre P. S-Kanke, Ranchi-835 222, Jharkhand, India ಇಲ್ಲಿ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>03</td><td>2025/09/03</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ಮುಖ್ಯಸ್ಥರನ್ನು ನೇಮಕ ಮಾಡಿ ಆದೇಶಿಸಿರುವ ವಿಷಯಗಳಿಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕೋರಿರುವ ಕುರಿತು</td></tr>
<tr><td></td><td>ತೀರ್ಮಾನ</td><td>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಕಲಂ 34(5) (7) ಮತ್ತು (8) ರಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಈ ಕೆಳಕಾಣಿಸಿದ ವಿಭಾಗಗಳಿಗೆ ಅಧ್ಯಕ್ಷರು/ಮುಖ್ಯಸ್ಥರನ್ನು ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.
<table>
<tr><th>ಸಂ</th><th>ಹೆಸರು</th><th>ವಿಭಾಗ</th></tr>
<tr><td>1</td><td>ಪ್ರೊ ಜೆ ಮಂಜಣ್ಣ, ಪ್ರಾಧ್ಯಾಪಕರು</td><td>ರಸಾಯನಶಾಸ್ತ್ರ ವಿಭಾಗ</td></tr>
<tr><td>2</td><td>ಪ್ರೊ. ಬಿ.ಜಿ. ಹೆಗಡೆ, ಪ್ರಾಧ್ಯಾಪಕರು</td><td>ಭೌತಶಾಸ್ತ್ರ ವಿಭಾಗ</td></tr>
<tr><td>3</td><td>ಪ್ರೊ ಅಶೋಕ ಡಿಸೋಜಾ ಪ್ರಾಧ್ಯಾಪಕರ</td><td>ಸಮಾಜಕಾರ್ಯ ವಿಭಾಗ</td></tr>
</table></td></tr>
<tr><td>04</td><td>2025/09/04</td><td>ಶ್ರೀಮತಿ ಸ್ಮಿತಾ ಕಟ್ಟಿ, ಪ್ರಥಮ ದರ್ಜೆ ಸಹಾಯಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ವಿದೇಶ ಪ್ರಯಾಣಕ್ಕಾಗಿ ನೂತನ ಪಾಸಪೋರ್ಟಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವಂತೆ ವಿನಂತಿಸಿರುವ ಬಗ್ಗೆ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಸ್ಮಿತಾ ಕಟ್ಟಿ ಇವರು ವಿದೇಶ ಪ್ರಯಾಣ ಕೈಗೊಳ್ಳಲು ನೂತನ ಪಾಸಪೋರ್ಟಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>05</td><td>2025/09/05</td><td>ಶ್ರೀ ರಾಘವೇಂದ್ರ ರ ಅನವೇಕರ, ಪ್ರಥಮ ದರ್ಜೆ ಸಹಾಯಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕಾರ್ಮಿಕ ಅಧಿಕಾರಿಯಾಗಿ ನೇಮಕಗೊಂಡಿರುವ</td></tr>
</table>

| | | |
|---|---|---|
| | | ಪ್ರಯುಕ್ತ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ರಾಜೀನಾಮೆ ನೀಡಿರುವ ಬಗ್ಗೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಘವೇಂದ್ರ ರ ಅನವೇಕರ ಇವರು ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಕ್ರೀಡೆಗಳು, ಪ್ಯಾರಾ ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳ ನೇಮಕಾತಿಯಡಿಯಲ್ಲಿ ವರ್ಗ-ಬಿ ವೃಂದದ ಕಾರ್ಮಿಕ ಅಧಿಕಾರಿ ಹುದ್ದೆಗೆ ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿರುವ ಪ್ರಯುಕ್ತ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಸಲ್ಲಿಸಿದ ರಾಜೀನಾಮೆಯನ್ನು ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ ನಿಯಮ 52(ಬಿ) ರನ್ವಯ ಅಂಗೀಕರಿಸಿ, ದಿನಾಂಕ: 10.09.2025 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶಿಸಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 06 | 2025/09/06 | ಪ್ರೊ. ವಿನಾಯಕ ಎಂ ಬಂಕಾಪೂರ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರನ್ನು ವಯೋನಿವೃತ್ತಿ ಹಿನ್ನಲೆಯಲ್ಲಿ ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊ ವಿನಾಯಕ ಎಂ ಬಂಕಾಪೂರ ಇವರಿಗೆ ದಿನಾಂಕ: 11.08.2025 ರಂದು 62 ವರ್ಷ ವಯಸ್ಸು ಪೂರ್ಣಗೊಳ್ಳುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮ 95 ಹಾಗೂ ಸರ್ಕಾರದ ಆದೇಶ ಸಂ:** ED 37 UNE 2009(P), BANGALORE, Dated: 15th October **2009 ರ ಪ್ರಕಾರ ದಿನಾಂಕ: 31.08.2025 ರಂದು ಸದರಿಯವರು ವಯೋನಿವೃತ್ತಿ ಹೊಂದುತ್ತಾರೆ. ದಿನಾಂಕ: 31.08.2025 ರಂದು ಭಾನುವಾರ ಸಾರ್ವತ್ರಿಕ ರಜೆ ಇರುವುದರಿಂದ, ದಿನಾಂಕ 30.08.2025 ರಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯದಿಂದ ಕಛೇರಿ ಸಮಯದ ನಂತರ ಬಿಡುಗಡೆಗೊಳಿಸಿ ಆದೇಶಿಸಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 07 | 2025/09/07 | ಕರ್ನಾಟಕ ಸಿವಿಲ್ ಸೇವೆಗಳು(ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000 ರ ಕಾರ್ಯನಿರ್ವಹಣಾ ವರದಿಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿಯ ನೌಕರರಿಗೂ ಅಳವಡಿಸಿಕೊಳ್ಳುವ ಕುರಿತು. |
| ತೀರ್ಮಾನ | | **ಕರ್ನಾಟಕ ಸಿವಿಲ್ ಸೇವೆಗಳು (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 2000 ರಿಂದ ಜಾರಿಗೆ ಬಂದಿರುತ್ತವೆ. ಸದರಿ ಕಾರ್ಯನಿರ್ವಹಣಾ ವರದಿಗಳನ್ನು ನಿರ್ವಹಿಸುವ ಬಗ್ಗೆ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 21 ಸೇವನೆ 2019 ಬೆಂಗಳೂರು, ದಿನಾಂಕ:16.308.2019 ರಲ್ಲಿ ಸಂಬಂಧಪಟ್ಟ ಎಲ್ಲಾ ಸಕ್ಷಮ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಸರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿಗಳು ಸೂಚಿಸಿರುತ್ತಾರೆ<br>ಕಾರ್ಯನಿರ್ವಹಣಾ ವರದಿಗಳು ರಾಜ್ಯ ಸಿವಿಲ್ ಸೇವಾ ನೌಕರರ (ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ), ಅವರು ಆಯಾ ವರ್ಷದಲ್ಲಿ ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ** |

ನಿಗದಿಪಡಿಸಿದ ಗುರಿಗಳನ್ನು ಸಾಧಿಸಿದ ಬಗ್ಗೆ ಅವರ ನಡವಳಿಕೆ, ಕಾರ್ಯದಕ್ಷತೆ, ನಿಷ್ಠತೆ, ಮೇಲ್ವಿಚಾರಣೆ, ಕಾರ್ಯನಿರ್ವಹಣೆ ಮುಂತಾದ ಅಂಶಗಳನ್ನು ಪ್ರತಿಬಿಂಬಿಸುವ ಒಂದು ದಾಖಲೆಯಾಗಿರುತ್ತದೆ.

ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಜಾರಿಯಲ್ಲಿರುವ ಕಾರ್ಯನಿರ್ವಹಣಾ ವರದಿಯು ಸಮಂಜಸವಾಗಿಲ್ಲವಾದ ಕಾರಣ, ಸರ್ಕಾರ ತಿಳಿಸಿರುವ ಕಾರ್ಯನಿರ್ವಹಣಾ ವರದಿಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.

ಮುಂದುವರೆದು, ವಿಶ್ವವಿದ್ಯಾಲಯದಲ್ಲಿ ದಕ್ಷ, ಪ್ರಾಮಾಣಿಕ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ “ಸೇವಾ ರತ್ನ” ಪ್ರಶಸ್ತಿ ನೀಡಲು ಸಿಬ್ಬಂದಿಗಳ ಕಾರ್ಯಗಳನ್ನು ಪರಿಶೀಲಿಸಿ ಹೆಸರುಗಳನ್ನು ಶಿಫಾರಸ್ಸು ಮಾಡಲು ಡಾ. ಮಹಾಂತೇಶ ಕಂಬಾರ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಕಾರಣ, ಸಿಬ್ಬಂದಿಗಳು ತಮ್ಮ ಸಾಧನೆ ಹಾಗೂ ಕಾರ್ಯನಿರ್ವಹಣಾ ಮಾಹಿತಿಯನ್ನು ಸದರಿ ಸಮಿತಿಗೆ ಸಲ್ಲಿಸುವಂತೆ ಸುತ್ತೋಲೆ ಹೊರಡಿಸಲು ಸಭೆಯು ಸೂಚಿಸಿತು.

| | | |
|---|---|---|
| 08 | 2025/09/08 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 12 ರಿಂದ 13A ಸಹ ಪ್ರಾಧ್ಯಾಪಕರ ಹಂತ ಹಾಗೂ ಹಂತ 14 ರಿಂದ 15 ಹಿರಿಯ ಪ್ರಾಧ್ಯಾಪಕರ ಹಂತಕ್ಕೆ ವೃತ್ತಿ ಪದೋನ್ನತಿ ನೀಡುವ ಕುರಿತು. |

ತೀರ್ಮಾನ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳಿಗೆ ಸಿ.ಎ.ಎಸ್. ಅಡಿಯಲ್ಲಿ 12 ರಿಂದ 13A ಸಹ ಪ್ರಾಧ್ಯಾಪಕರ ಹಂತ ಹಾಗೂ ಹಂತ 14 ರಿಂದ 15 ಹಿರಿಯ ಪ್ರಾಧ್ಯಾಪಕರ ಹಂತಕ್ಕೆ ವೃತ್ತಿ ಪದೋನ್ನತಿ ನೀಡಲು ಯುಜಿಸಿ ನಿಯಮಾನುಸಾರ ತಜ್ಞರನ್ನು ಒಳಗೊಂಡು SELECTION COMMITTEE ರಚಿಸಲಾಗಿತ್ತು. ಸದರಿ ಸಮಿತಿಯು ಅಧ್ಯಾಪಕರುಗಳ ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನ ನಡೆಸಿ ಸಲ್ಲಿಸಿರುವ ಶಿಫಾರಸ್ಸು ವರದಿಯನ್ನು ಈ ಕೆಳಕಾಣಿಸಿದಂತೆ ಸಭೆ ಪ್ರಸ್ತುತಪಡಿಸಲಾಯಿತು.

| Sl No | Name of the Faculty and Dept | Academic Level | Committee Recommandation |
|---|---|---|---|
| 1 | Dr Shobha Nayak Kannada Department | Assistant Professor to Associate Professor (Selection Grade/Academic Level 12 to 13 A) | Recommanded |
| 2 | Prof. S. B. Akash Commerce Department | Professor to Senior Professor (Selection Grade/Academic Level 14 to 15) | Recommanded |
| 3 | Prof Chandrika.K.B. Sociology Dept | Professor to Senior Professor (Selection Grade/Academic Level 14 to 15) | Recommanded |
| 4 | Prof. C. N. Waghamare Marathi Dept | Professor to Senior Professor (Selection Grade/Academic Level 14 to 15) | Not Recommanded |

| | | |
|---|---|---|
| | | ಶ್ರೀ ವಿನೀತ ಜೋಶಿ ಇವರು ಮಾತನಾಡಿ, ಪ್ರಾಧ್ಯಾಪಕ ಹುದ್ದೆಯಿಂದ ಹಿರಿಯ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಪಡೆಯಲು 10 ವರ್ಷಗಳ ಅವಧಿವರೆಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ ಅನುಭವ ಇರುವುದು ಅವಶ್ಯವಿದ್ದು SELECTION COMMITTEE ಯಲ್ಲಿರುವ ಸದಸ್ಯರು ತಮಗಿಂತ ಕಿರಿಯರಾಗಿರುತ್ತಾರೆ ಎಂದು ಪ್ರೊ. ಸಿ. ಎನ್. ವಾಘಮಾರೆ ಇವರು ಆಕ್ಷೇಪಣೆ ಸಲ್ಲಿಸಿರುವ ಮಾಹಿತಿಯನ್ನು ಸಭೆಗೆ ನೀಡಿದರು. ಪ್ರತಿಕ್ರಿಯಿಸಿದ ಕುಲಪತಿಗಳು ಯುಜಿಸಿ ನಿಯಮಾನುಸಾರ/ಮಾನದಂಡಗಳನ್ವಯ SELECTION COMMITTEE ರಚಿಸಲಾಗಿದೆ. ಸಂಬಂಧಿಸಿದ ಸಂದರ್ಶನದ ವಿಡಿಯೋಗಳನ್ನು ಸದಸ್ಯರುಗಳು ಪರಿಶೀಲಿಸಬಹುದು ಎಂದರು.<br><br>ಚರ್ಚಿಸಿದ ಸಭೆಯು ಪ್ರೊ. ಸಿ. ಎನ್. ವಾಘಮಾರೆ ಇವರು ತಮ್ಮ ಆಕ್ಷೇಪಣೆಯನ್ನು ಲಿಖಿತ ರೂಪದಲ್ಲಿ ನೀಡಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಹಾಗೂ ಪಟ್ಟಿಯಲ್ಲಿ ತಿಳಿಸಿರುವ ಸಂ. 1, 2, 3 ಸಿಬ್ಬಂದಿಗಳಿಗೆ SELECTION COMMITTEE ಯ ಶಿಫಾರಸ್ಸಿನಂತೆ ಪದೋನ್ನತಿ ನೀಡಲು ಸಭೆಯು ತೀರ್ಮಾನಿಸಿತು. |
| 09 | 2025/09/09 | ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ವಿದ್ಯಾರ್ಹತೆಯ ಅನುಗುಣವಾಗಿ ದ್ವಿತೀಯ ದರ್ಜೆ ಸಹಾಯಕ/ಡಾಟಾ ಎಂಟ್ರಿ ಆಪ್‌ರೇಟರ ಹುದ್ದೆಯ ವೇತನದಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸಮನಾದ ವೇತನ ನಿಗದಿಪಡಿಸಿ ಮುಂದುವರೆಸಲು ಅನುಮೋದನೆಯನ್ನು ನೀಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಳೆದ 8 ರಿಂದ 10 ವರ್ಷಗಳ ಅವಧಿವರೆಗೆ ಒಂದೇ ಹುದ್ದೆಯಲ್ಲಿ ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಕಾರ್ಯ ವರದಿ ಮತ್ತು ನಿಗದಿಪಡಿಸಿರುವ ವೇತನವನ್ನು ಕುಲಸಚಿವರು ಸಭೆಗೆ ಮಾಹಿತಿ ನೀಡಿದರು. ಒಟ್ಟು 7 ಸಿಬ್ಬಂದಿಗಳಲ್ಲಿ 4 ದ್ವಿತೀಯ ದರ್ಜೆ ಸಹಾಯಕ/ಡಾಟಾ ಎಂಟ್ರಿ ಆಪ್‌ರೇಟರ ಸಿಬ್ಬಂದಿಗಳಾದ ಶ್ರೀ ಅಭಿಜಿತ್ ಚೌಗಲೆ, ಶ್ರೀ ಪೂಜಾ ಪಾಟೀಲ್, ಶ್ರೀಮತಿ ಭಾಗ್ಯಮಂಗಳ ಹಾಗೂ ಶ್ರೀ ಮಂಜುನಾಥ ಹುಣಶಿಕಟ್ಟಿ ಇವರುಗಳು ಅತ್ಯಂತ ದಕ್ಷ ಮತ್ತು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ಪ್ರಸ್ತುತ ಸದರಿ ಸಿಬ್ಬಂದಿಗಳು ರೂ.28'133/-ಗಳ ವೇತನವನ್ನು ಪಡೆಯುತ್ತಾರೆ ಆದರೆ, ಸದರಿ ಸಿಬ್ಬಂದಿಗಳ work performance ಗಮನಿಸಿದರೇ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನಿಗದಿಪಡಿಸಿದ ವೇತನವನ್ನು ಪಡೆಯಲು ಅರ್ಹರಿರುತ್ತಾರೆ. ಮಾನವೀಯ ಆಧಾರದ ಮೇಲೆ ಸದರಿ ಸಿಬ್ಬಂದಿಗಳ ವೇತನವನ್ನು ಪರಿಷ್ಕೃರಿಸಲು ಸಭೆಗೆ ಮಂಡಿಸಲಾಯಿತು.<br><br>ಪರಿಶೀಲಿಸಿದ ಸಭೆಯು, ಶ್ರೀಮತಿ ಭಾಗ್ಯಮಂಗಳ ಇವರು ಹಿಂದಿ ವಿಷಯದಲ್ಲಿ ಪದವಿ ಪಡೆದಿರುವುದರಿಂದ ಪದವಿಯೆಂದು ಪರಿಣಿಸಲು ಕರ್ನಾಟಕ ಸರ್ಕಾರದ ಸಮಾಂತರ ಆದೇಶ ನೀಡಿದಲ್ಲಿ ಮಾತ್ರ ಅವರ ವೇತನವನ್ನು ಪರಿಷ್ಕೃರಿಸುವುದು. ಪ್ರಸ್ತುತ ಉಳಿದ (03) ಸಂಚಿತ ವೇತನದ ಸಿಬ್ಬಂದಿಗಳಾದ ಶ್ರೀ ಅಭಿಜಿತ್ ಚೌಗಲೆ, ಶ್ರೀ ಪೂಜಾ ಪಾಟೀಲ್, ಹಾಗೂ ಶ್ರೀ ಮಂಜುನಾಥ ಹುಣಶಿಕಟ್ಟಿ ಇವರುಗಳ ವೇತನವನ್ನು ಪರಿಷ್ಕರಿಸಿ ಸಂಚಿತ ವೇತನದ ಪ್ರಥಮ ದರ್ಜೆ ಸಹಾಯಕರು ಪಡೆಯುತ್ತಿರುವ ವೇತನವನ್ನು ನಿಗದಿಪಡಿಸಲು ಹಾಗೂ ಸರ್ಕಾರದಿಂದ ಮಂಜೂರಾಗಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು ಮತ್ತು ಫಿಲ್ಡ್ ಕೋಚಿಸ್ ಪ್ರತಿಯಾಗಿ, FDA ತಾತ್ಕಾಲಿಕ |

| | | |
|---|---|---|
| | | **ಸಮಾನಾಂತರ ವೇತನವನ್ನು ನಿಗದಿಪಡಿಸಿ ಮುಂದುವರೆಸಿ ಆದೇಶಿಸಲು ಸಭೆಯು ಅನುಮೋದನೆ ನೀಡಿತು.** |
| 10 | 2025/09/10 | 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಮಿತಿ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2025-26 ನೇ ಶೈಕ್ಷಣಿಕ ಸಾಲಿನ ಈ ಕೆಳಗಿನ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಮಿತಿಗೆ ಸಂಬಂಧಪಟ್ಟಂತೆ ಸಭೆಯ ಅನುಸಮರ್ಥನೆ ಕೋರಿ ಮಂಡಿಸಲಾಯಿತು.**<br>**1. ದಿನಾಂಕ: 12-08-2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣದ ಇತಿಹಾಸ ವಿಭಾಗಕ್ಕೆ ಪ್ರಸ್ತುತವಿರುವ 30 ಪ್ರವೇಶ ಮಿತಿಯನ್ನು 40 ಕ್ಕೆ ಹೆಚ್ಚಿಸಿ ಸಭೆಯ ಅನುಮೋದನೆ ಪಡೆಯಲಾಗಿತ್ತು. 2025-26 ನೇ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳ ಬೇಡಿಕೆಯ ಅನುಸಾರ ಹಾಗೂ ವಿಭಾಗದ ಮುಖ್ಯಸ್ಥರ ಮನವಿ ಪತ್ರದ ಮೇರೆಗೆ ಇತಿಹಾಸ ವಿಭಾಗದ ಮುಖ್ಯ ಆವರಣದ ಹಾಗೂ ವಿಜಯಪುರ, ಸ್ನಾತಕೋತ್ತರ ಕೇಂದ್ರದಲ್ಲಿನ ಪ್ರವೇಶ ಮಿತಿಯನ್ನು 40 ರಿಂದ 50 ಕ್ಕೆ ಹೆಚ್ಚಿಸಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಚ್ಚಿಸಲಾದ ಪ್ರವೇಶ ಮಿತಿಗಳಿಗೆ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.**<br>**2 2025-26ನೇ ಪ್ರವೇಶಾತಿ ಸಮಯದಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣದ ರಸಾಯನಶಾಸ್ತ್ರ ವಿಭಾಗಕ್ಕೆ ಹೆಚ್ಚುವರಿ ಶುಲ್ಕದ ಕೋಟಾದಡಿಯಲ್ಲಿ ವಿದ್ಯಾರ್ಥಿಗಳ ಬೇಡಿಕೆ ಹಾಗೂ ವಿಭಾಗದ ಮುಖ್ಯಸ್ಥರ ಮನವಿ ಪತ್ರದ ಮೇರೆಗೆ ಹೆಚ್ಚುವರಿ ಶುಲ್ಕದ ಕೋಟಾದಡಿಯಲ್ಲಿ 02 ಹೆಚ್ಚುವರಿಯಾಗಿ ನೀಡಲಾದ ಸೀಟುಗಳಿಗೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.** |
| 11 | 2025/09/11 | ಎರಡು ಶಿಕ್ಷಣ ಮಹಾವಿದ್ಯಾಲಯಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿರುವ ಬಗ್ಗೆ ಸಭೆಯಲ್ಲಿ ಚರ್ಚೆ |
| | ತೀರ್ಮಾನ | **ಮುಂದೂಡಲಾಯಿತು.** |
| 12 | 2025/09/12 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ರಸ್ತೆಗಳಿಗೆ ಮತ್ತು ಸಭಾಂಗಣಗಳಿಗೆ ಕನ್ನಡದ ಖ್ಯಾತ ಸಾಹಿತಿಗಳು, ನದಿಗಳು ಕಲಾ ಪ್ರಕಾರಗಳು, ಸ್ವಾತಂತ್ರ ಹೋರಾಟಗಾರರ ಹೆಸರು ಸೂಚಿಸುವ ಕುರಿತು. |
| | ತೀರ್ಮಾನ | **ಮುಂದೂಡಲಾಯಿತು.** |
| 13 | 2025/09/13 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿ ನಿಲಯಗಳ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬ್ರಹ್ಮಪುತ್ರ ಹಾಗೂ ಕೃಷ್ಣಾವಸತಿ ನಿಲಯಗಳ ಕೊಠಡಿ ಶುಲ್ಕ, ಮೆಸ್ ಠೇವಣಿ, ವಿದ್ಯುತ್ ಶುಲ್ಕ ಹಾಗೂ ಇನ್ನಿತರ ಶುಲ್ಕಗಳನ್ನು 2019-20 ನೇ ಸಾಲಿನಿಂದ ಪರಿಷ್ಕೃತಗೊಂಡಿರುವುದಿಲ್ಲ, ಮುಂದುವರೆದು, ಶಿವಬಸವ ನಗರ, ಬೆಳಗಾವಿಯ ವಿದ್ಯಾರ್ಥಿನಿಯರ ವಸತಿನಿಲಯದ ಶುಲ್ಕ ಹೆಚ್ಚಾಗಿರುತ್ತದೆ. ಕಾರಣ, ಆವರಣದಲ್ಲಿರುವ ಬ್ರಹ್ಮಪುತ್ರ ಹಾಗೂ ಕೃಷ್ಣಾ ವಸತಿ ನಿಲಯಗಳ ಮತ್ತು ವಿದ್ಯಾರ್ಥಿನಿಯರ ವಸತಿನಿಲಯ, ಶಿವಬಸವ ನಗರ ಇವುಗಳ ಶುಲ್ಕಗಳನ್ನು ಪರಿಷ್ಕರಿಸುವ ವಿಷಯವನ್ನು ಸಭೆಗೆ ಮಂಡಿಸಲಾಯಿತು.** |

| | | |
|---|---|---|
| | | ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬ್ರಹ್ಮಪುತ್ರ ಹಾಗೂ ಕೃಷ್ಣಾವಸತಿ ನಿಲಯಗಳ ಮತ್ತು ಶಿವಬಸವ ನಗರ, ಬೆಳಗಾವಿಯ ವಿದ್ಯಾರ್ಥಿನಿಯರ ವಸತಿನಿಲಯದ ಸಾಮಾನ್ಯ ಅಭ್ಯರ್ಥಿಗಳು-ರೂ.9000/- ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳು-ರೂ.7000/-ಗಳನ್ನು ವರ್ಷಕ್ಕೆ ಶುಲ್ಕಗಳನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು. |
| 14 | 2025/09/14 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ (RCU-FESMA) ಸ್ಥಾಪಿಸಿದ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಮತ್ತು ಸೀಡ್ ಮನಿ ಒದಗಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ದಿನಾಂಕ: 06-06-2025 ರಂದು ನಡೆದ ವಿದ್ಯಾವಿಷಯಕ್ ಪರಿಷತ್‌ನಲ್ಲಿ (RCU-FESMA) ಸ್ಥಾಪಿಸಲು ಅನುಮೋದನೆ ನೀಡಲಾಗಿತ್ತು. ಸದರಿ (RCU-FESMA) ಕಂಪನಿ ಸ್ಥಾಪಿಸಲು ದರಪಟ್ಟಿಯನ್ನು ಆಹ್ವಾನಿಸಲಾಗಿತ್ತು ದರಪಟ್ಟಿ ಸಲ್ಲಿಸಿರುವ 3 ರಲ್ಲಿ Mr. Sudhir B Sutar, Company Secretary ಇವರು (L1) ಕಡಿಮೆ ದರ ಇರುವುದರಿಂದ ಕಂಪನಿ ಸ್ಥಾಪಿಸಲು ಅವಶ್ಯವಿರುವ (MoA & AoA) ಇತ್ಯಾದಿ ಕಡತಗಳನ್ನು ಸಿದ್ಧಪಡಿಸಿ DS MINISTRY OF CORPORATE AFFAIRS OFFICE OF THE REGISTRAR OF COMPANIES ಇವರಿಗೆ ಸಲ್ಲಿಸಲು Mr. Sudhir B Sutar, Company Secretary ಇವರಿಗೆ ಕಾರ್ಯಾದೇಶವನ್ನು ನೀಡಲಾಗಿತ್ತು. ಅದರಂತೆ ದಿನಾಂಕ:27-08-2025 ರಂದು Foundation for entrepreneurship, skilling development and Management Academia A Section 8 Company (RCU-FESMA) ನ್ನು ಸ್ಥಾಪಿಸಲಾಗಿದೆ. ಇದರಿಂದ ಸಿ.ಎಸ್.ಆರ್ ಹಾಗೂ NSDC ನಿಂದ ಅನುದಾನಗಳ ಸೌಲಭ್ಯ ಪಡೆಯಬಹುದಾಗಿದೆ ಹಾಗೂ, ಕೌಶಲ್ಯ ಚಟುವಟಿಗಳು ಉತ್ತಮಗೊಳಿಸಲು ಸಹಾಯಕಾರಿಯಾಗಲಿದೆ. ಕಾರಣ, 5 ಲಕ್ಷ ರೂಪಾಯಿಗಳ ಸೀಡ್ ಮನಿ ಒದಗಿಸಲು ಕೋರಲಾಯಿತು.<br>ಕುಲಸಚಿವರು ಮಾತನಾಡಿ, IIT, TTT, Agricultural University ಇವರುಗಳು ಜಾರಿಗೊಳಿಸಿದ FESMA ಕಂಪನಿಯನ್ನು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಲಾಗುತ್ತಿದೆ. ಸನ್ಮಾನ್ಯ ಮಂತ್ರಿಗಳಾದ ಶ್ರೀ ಪ್ರಿಯಾಂಕಾ ಖರ್ಗೆ ಇವರು ಕೌಶಲ್ಯ ಅಭಿವೃದ್ಧಿಗೋಸ್ಕರ ಅನುದಾನ ಮಂಜೂರು ಮಾಡುತ್ತಿದ್ದು, FESMA ಕಂಪನಿಗೆ ಅನುದಾನ ದೊರೆಯುವ ಸಂಭವವಿರುತ್ತದೆ. Deshpande Skilling ವತಿಯಿಂದ MoU ಅನ್ವಯ University Alumni ಗಳಿಗೆ ಕೌಶಲ್ಯ ತರಬೇತಿ ಒದಗಿಸಿ ವಿಶ್ವವಿದ್ಯಾಲಯದ 5 ವಿದ್ಯಾರ್ಥಿಗಳನ್ನು ಸಂಯೋಜಿತ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ವಿವಿಧ ಕೌಶಲ್ಯ ತರಬೇತಿ ನೀಡಲು ನೇಮಿಸಿ ಆದೇಶಿಸಲಾಗಿದೆ. ಇದರಿಂದಾಗಿ ಈಗಾಗಲೇ ಅಂದಾಜು ರೂ. 2,30,000/-ಗಳ ಹಣ ಸಂಗ್ರವಾಗಿರುತ್ತದೆ ಎಂದರು.<br>ಚರ್ಚಿಸಿದ ಸಭೆಯು, RCU-FESMA ವತಿಯಿಂದ ರೂ. 5 ಲಕ್ಷಗಳ ಸೀಡ್ ಮನಿ(Advance) ಮಂಜೂರು ಮಾಡಲು ತೀರ್ಮಾನಿಸಿತು ಮತ್ತು RCU-FESMA A Section 8 ಕಂಪನಿ ಸ್ಥಾಪಿಸಿರುವುದಕ್ಕೆ ಅನುಸಮರ್ಥನೆ ನೀಡಿ, ಸದರಿ ಕಾರ್ಯಕ್ಕೆ ಸಭೆ ಹರ್ಷ ವ್ಯಕ್ತಪಡಿಸಿತು. |
| 15 | 2025/09/15 | ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು |

| | | |
|---|---|---|
| | ತೀರ್ಮಾನ | **ದಿನಾಂಕ: 01.08.2025 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |
| 16 | 2025/09/16 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25 ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ & ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕ & ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಮುದ್ರಿಸಿ ಸರಬರಾಜು ಮಾಡುವ ಕಾರ್ಯವನ್ನು GeM ಪೋರ್ಟಲ್ ಮೂಲಕ ಅರ್ಹರಾದ M/S. Printography Systems (India) Pvt. Ltd., Mumbai ಇವರಿಗೆ ಕಛೇರಿ ಆದೇಶ ನೀಡಲಾಗಿತ್ತು. ಸದರಿಯವರ ಕರಾರು ಒಪ್ಪಂದ ಅವಧಿಯು 05-08-2025 ರಂದು ಮುಕ್ತಾಯವಾಗಿದ್ದು, ಸದರಿ ಕರಾರು ಒಪ್ಪಂದದ ಷರತ್ತು 14 ರನ್ವಯ ಅದೇ ದರಗಳನ್ವಯ ಒಪ್ಪಂದವನ್ನು 3 ವರ್ಷಗಳವರೆಗೆ ಮುಂದುವರೆಸಬಹುದಾಗಿದ್ದು ಹಾಗೂ KTPP Act rules section 12 (5) ರನ್ವಯ ಟೆಂಡರ್ ಪ್ರಮಾಣದ ಶೇ.25% ಹೆಚ್ಚುವರಿ ಖರೀದಿಸಬಹುದಾಗಿದೆ. ಅದರಂತೆ ಈಗ 2024-25 ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ & ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಹಾಗೂ ತಿದ್ದುಪಡಿ ಅಂಕಪಟ್ಟಿಗಳು & ಪ್ರಮಾಣಪತ್ರಗಳನ್ನು ಮುದ್ರಿಸಿ ಸರಬರಾಜು ಮಾಡಬೇಕಾಗಿರುವುದರಿಂದ, ಸದರಿ ಕರಾರು ಒಪ್ಪಂದದ ಷರತ್ತು 14 ರನ್ವಯ ಮತ್ತು KTPP Act rules section 12 (5) ರನ್ವಯ ತುರ್ತಾಗಿರುವ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಮತ್ತು ಅಂಕಪಟ್ಟಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಕಾರ್ಯವನ್ನು ಕೈಗೊಳ್ಳಲು M/S. Printography Systems (India) Pvt. Ltd., Mumbai ಇವರೊಂದಿಗೆ ಒಂದು ವರ್ಷದ ಅವಧಿಗೆ Extended Agreement ಮಾಡಿಕೊಂಡು, ಆದೇಶ ನೀಡಲಾಗಿದ್ದು ಇದಕ್ಕೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಿತು.** |
| 17 | 2025/09/17 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25 ಮತ್ತು 2025-26 ನೇ ಶೈಕ್ಷಣಿಕ ಸಾಲಿನ ಹಾಗೂ ತದನಂತರದ ಸಾಲಿನ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಮುದ್ರಿಸಿ ಸರಬರಾಜು ಮಾಡುವ ಕಾರ್ಯವನ್ನು ಎರಡು ವರ್ಷದ ಅವಧಿಗೆ ಟೆಂಡರ ಕರೆದು ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 18 | 2025/09/18 | ಯು.ಯು.ಸಿ.ಎಮ್.ಎಸ್. ಅಡಿಯಲ್ಲಿ ಬರುವ ವಿವಿಧ ಸ್ನಾತಕ, ಸ್ನಾತಕೋತ್ತರ, ಬಿ.ಎಡ್. ಬಿಪಿ.ಎಡ್, ವಿವಿಧ ಡಿಪ್ಲೋಮಾ, ರಿಪಿಟರ್ ವಿದ್ಯಾರ್ಥಿಗಳ ಮತ್ತು ಪಿಹೆಚ್.ಡಿ. ವಿದ್ಯಾರ್ಥಿಗಳ ಪರೀಕ್ಷೆಗಳ ಪರೀಕ್ಷಾ ನಂತರದ ಕಾರ್ಯಗಳನ್ನು ಕೈಗೊಳ್ಳುವ ಕುರಿತು. |
| | ತೀರ್ಮಾನ | **2024-25ನೇ ಶೈಕ್ಷಣಿಕ ಸಾಲಿನ ಯು.ಯು.ಸಿ.ಎಮ್.ಎಸ್. ಅಡಿಯಲ್ಲಿ ಬರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಪರೀಕ್ಷಾ ನಂತರ ಕಾರ್ಯಗಳನ್ನು ನಿರ್ವಹಿಸಲು ಲಾಜಿಸೆಸ್, ಬೆಂಗಳೂರು ಇವರೊಂದಿಗೆ ಮಾಡಿಕೊಂಡ ಒಪ್ಪಂದವು 2024-25ನೇ ಶೈಕ್ಷಣಿಕ ಸಾಲಿನ ಪರೀಕ್ಷೆಗಳಿಗೆ ಸೀಮಿತವಾಗಿರುತ್ತದೆ. ಮುಂದುವರೆದು, 2025-26ನೇ ಶೈಕ್ಷಣಿಕ ಸಾಲಿನ** |

| | | |
|---|---|---|
| | | **ಯು.ಯು.ಸಿ.ಎಮ್.ಎಸ್. ಅಡಿಯಲ್ಲಿ ಬರುವ ವಿವಿಧ ಸ್ನಾತಕ, ಸ್ನಾತಕೋತ್ತರ ಬಿ.ಎಡ್, ಬಿಪಿ.ಎಡ್, ವಿವಿಧ ಡಿಪ್ಲೋಮಾ ರಿಪಿಟರ್ ವಿದ್ಯಾರ್ಥಿಗಳ ಮತ್ತು ಪಿಹೆಚ್.ಡಿ ವಿದ್ಯಾರ್ಥಿಗಳ ಪರೀಕ್ಷೆಗಳ ಪರೀಕ್ಷಾ ನಂತರದ ಕಾರ್ಯಗಳನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ ಆಹ್ವಾನಿಸಿ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 19 | 2025/09/19 | 2024-25ನೇ ಶೈಕ್ಷಣಿಕ ಸಾಲಿನಲ್ಲಿ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿದ 07 ಮಹಾವಿದ್ಯಾಲಯಗಳಿಗೆ ಸರ್ಕಾರದ ನಿರ್ದೇಶದನ್ವಯ ನೋಟಿಸ್ ಜಾರಿ ಮಾಡಿ, ಅವರಿಂದ ಸ್ಪಷ್ಟೀಕರಣವನ್ನು ಪಡೆಯಲು ಸೂಚಿಸಲಾಗಿತ್ತು. ಅದರನ್ವಯ, ಸಂಬಂಧಿತ ಮಹಾವಿದ್ಯಾಲಯಗಳಿಂದ ಸ್ಥಗಿತಕ್ಕಾಗಿ ಪಡೆದ ಸ್ಪಷ್ಟೀಕರಣವನ್ನು ದಾಖಲೆಗಳೊಂದಿಗೆ, ಕೋರ್ಸ್/ಮಹಾವಿದ್ಯಾಲಯಗಳ ಸ್ಥಗಿತಕ್ಕಾಗಿ ಸರ್ಕಾರಕ್ಕೆ ಮತ್ತೊಮ್ಮೆ ಶಿಫಾರಸ್ಸು ಮಾಡಲು ಅನುಮೋದನೆಗಾಗಿ ಮಂಡಿಸಿರುವ ಕುರಿತು. |
| | ತೀರ್ಮಾನ | **ಮುಂದೂಡಲಾಯಿತು** |
| 20 | 2025/09/20 | ಸರ್ಕಾರದ ಆದೇಶದನ್ವಯ, ಸರ್ಕಾರಿ ಮಹಾವಿದ್ಯಾಲಯಗಳಿಂದ ಸಂಯೋಜನೆ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ವಸೂಲಿ ಮಾಡದಂತೆ, ಜೊತೆಗೆ ಈಗಾಗಲೇ ಪಾವತಿಸಿರುವ ಸಂಯೋಜನೆ ಶುಲ್ಕಗಳನ್ನು ಮರುಪಾವತಿಸಲು ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು ಸೂಚಿಸಿರುವ ಹಿನ್ನೆಲೆಯಲ್ಲಿ, ಈ ಸಂಬಂಧ ಸೂಕ್ತ ನಿರ್ದೇಶನವನ್ನು ಕೋರಿ ಪ್ರಸ್ತಾವನೆ ಸಲ್ಲಿಸುತ್ತಿರುವ ಕುರಿತು. |
| | ತೀರ್ಮಾನ | **ಮುಂದೂಡಲಾಯಿತು** |
| 21 | 2025/09/21 | ಶಿವಾನಂದ ಮಹಾವಿದ್ಯಾಲಯ, ಕಾಗವಾಡವು ಬಿ.ಬಿ.ಎ ಕೋರ್ಸನ್ನು 2018-19 ರಲ್ಲಿ ಸ್ಥಗಿತಗೊಳಿಸಲು ಅರ್ಜಿ ಸಲ್ಲಿಸಿದ್ದು, ಸಂಯೋಜನಾ ವಿನಾಯಿತಿ ನೀಡಲು ನಿರ್ದೇಶಿಸಿರುವ ಕುರಿತು |
| | ತೀರ್ಮಾನ | **ಮುಂದೂಡಲಾಯಿತು** |
| 22 | 2025/09/22 | ವಿಶ್ವವಿದ್ಯಾಲಯದ Work Committee ಗಳಿಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ದಿನಾಂಕ 27.09.2025 ರಂದು 2025-26 ನೇ ಸಾಲಿನ ಎರಡನೇ Work Committee ಸಭೆಯ ನಡಾವಳಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು. ಈ ಕೆಳಗೆ ಶಿಫಾರಸ್ಸು ಮಾಡಿರುವ 5 ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು ಸಭೆಯು ತೀರ್ಮಾನಿಸಿತು.**<br>**01** **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂತರಾಮನಹಟ್ಟಿ ಆವರಣದ ಶೈಕ್ಷಣಿಕ ಕಟ್ಟಡದಲ್ಲಿ ಹೆಚ್ಚುವರಿ ನೂತನ Toilets ಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳುವುದು.**<br>**02** **Providing Internal water supply Scheme through Borewell Source to RCU New campus, at Hirebagewadi, Belagavi**<br>**03** **ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಆಂಜನೇಯನಗರ, ಬೆಳಗಾವಿಯಲ್ಲಿ NCC ಕೊಠಡಿಗಳ Renovation ಹಾಗೂ ಮಹಾವಿದ್ಯಾಲಯದಲ್ಲಿನ ಇನ್ನಿತರ Minor Worksಗಳ ಕಾಮಗಾರಿಗಳನ್ನು ಕೈಗೊಳ್ಳುವುದು.**<br>**04** **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ PM USHA (MERU) ಅಡಿಯಲ್ಲಿ ಖರೀದಿಸಲಾದ ವಿಜ್ಞಾನ ಹಾಗೂ ಇತರ ವಿಭಾಗಗಳ ಉಪಕರಣಗಳನ್ನು ಇರಿಸಲು ತಾತ್ಕಾಲಿಕವಾಗಿ Research Wing ನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವ ಕುರಿತು.** |

| | | |
|---|---|---|
| | | 05 ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾ ಸಂಗಮದ ಮುಖ್ಯ ಆವರಣದ ಕಟ್ಟಡಗಳಲ್ಲಿ ಕೈಗೊಂಡಿರುವ Rewiring of Main building, administrative building, Chemistry department and quarters of RCU Main campus, Bhutaramanahatti, Belagavi ಕಾಮಗಾರಿಯಲ್ಲಿ ಆಗಬಹುದಾದ ಹೆಚ್ಚುವರಿ (EIRL) Items ಮತ್ತು ಪರಿಮಾಣ (Work Slip)ಗಳಿಗೆ ಸಿಂಡಿಕೇಟ್ ಅನುಮೋದನೆ ನೀಡಿತು (RCUB/2025-26/EL/WORK_INDENT 10) |
| | | **ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು ಗುತ್ತಿಗೆದಾರರಿಗೆ ಅಂತಿಮ ಬಿಲ್ಲನ್ನು (ರೂ 5 ಲಕ್ಷ ಮೇಲ್ಪಟ್ಟು) ಸಂದಾಯ ಮಾಡುವ ಪೂರ್ವದಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆದುಕೊಂಡು ಸಂದಾಯ ಮಾಡಲು ಸಲಹೆ ನೀಡಿದರು. ಬೇರೆ ಬೇರೆ ವಿಶ್ವವಿದ್ಯಾಲಯಗಳು ಅನುಸರಿಸುತ್ತಿರುವ ಕ್ರಮಗಳನ್ನು ಪರಿಶೀಲಿಸಿ ನಿರ್ಧರಿಸಲಾಗುವುದು ಎಂದು ಕುಲಪತಿಗಳು ಉತ್ತರಿಸಿದರು.** |
| 23 | 2025/09/23 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಖರೀದಿ ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು |
| | ತೀರ್ಮಾನ | **ಮುಂದೂಡಲಾಯಿತು** |
| 24 | 2025/09/24 | 4ನೇ AQAR (2024-25) ನ್ನು ಸಿದ್ಧಪಡಿಸಿ ನ್ಯಾಕ್‌ಗೆ ಸಲ್ಲಿಸಲು ಅನುಮತಿ ಕುರಿತು. |
| | ತೀರ್ಮಾನ | **2024-25 ನೇ ಶೈಕ್ಷಣಿಕ ವರ್ಷಕ್ಕೆ IQAC ನಾಲ್ಕನೇ ವಾರ್ಷಿಕ ಗುಣಮಟ್ಟ ಭರವಸೆ ವರದಿ(AQAR) ನ್ನು ನ್ಯಾಕ್‌ಗೆ ಸಲ್ಲಿಸಲು ಸಿದ್ಧಪಡಿಸಲಾಗುತ್ತಿದೆ. ವಾರ್ಷಿಕ ಗುಣಮಟ್ಟ ಭರವಸೆ ವರದಿ, ನ್ಯಾಕ್ ನಿರ್ದಿಷ್ಟಪಡಿಸಿದ 7 ಮಾನದಂಡಗಳಲ್ಲಿ ವಿಶ್ವವಿದ್ಯಾಲಯದ ಮಾಹಿತಿ/ವಿವರಗಳನ್ನು ಒಳಗೊಂಡಿರುತ್ತದೆ. ಜೂನ್ 01, 2024 ರಿಂದ ಮೇ 31, 2025 ರವರೆಗಿನ ಅವಧಿಗೆ ವಿವಿಧ ವಿಭಾಗ/ಕೋಶಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕಾರಣ, ಸದರಿ ನಾಲ್ಕನೇ ವಾರ್ಷಿಕ ಗುಣಮಟ್ಟ ಭರವಸೆ ವರದಿಯನ್ನು ಸಿದ್ಧಪಡಿಸಿ ನ್ಯಾಕ್‌ಗೆ ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| 25 | 2025/09/25 | ಮಾನ್ಯ ಸಿಂಡಿಕೇಟ್ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳು |
| | ತೀರ್ಮಾನ | **ಮುಂದೂಡಲಾಯಿತು.** |
| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು | | |
| 26 | 2025/09/1 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಸ್ನಾತಕ/ಸ್ನಾತಕೋತ್ತರ(PG/UG) ಸಂಯೋಜಿತ ಮಹಾವಿದ್ಯಾಲಯಗಳ Staff Approval ನ್ನು ವಿದ್ಯಾಮಂಡಳ ವಿಭಾಗದಿಂದ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಇರುವ ಎಲ್ಲ ಸ್ನಾತಕ/ಸ್ನಾತಕೋತ್ತರ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರ/ಬೋಧಕ ಸಿಬ್ಬಂದಿಗಳ ಅಂಕಪಟ್ಟಿಗಳ ಪರಿಶೀಲನೆ ಹಾಗೂ ಅರ್ಹತಾ ಮಾನದಂಡಗಳನ್ನು ನಡೆಸುವ ಜವಾಬ್ದಾರಿ ಪರಿಣಿತಿಯನ್ನು ಪರಿಶೀಲನೆಗೊಳಿಸಿ, ವಿಶ್ವವಿದ್ಯಾಲಯದಿಂದ Staff Approval ನ್ನು ಅನುಮೋದಿಸಲು, ಸ್ನಾತಕ/ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರ/ಬೋಧಕ ಸಿಬ್ಬಂದಿಗಳ Staff Approval ನ್ನು ದಿನಾಂಕ: 6.6.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ನಿಗದಿಪಡಿಸಿರುವ** |

| | | |
|---|---|---|
| | | **ಶುಲ್ಕವನ್ನು ಸಾಮಾನ್ಯ ನಿಧಿ ಖಾತೆಯ ಬಜೆಟ್ ಸಂಖ್ಯೆ 602 ಕ್ಕೆ ಭರಿಸಿಕೊಂಡು ವಿದ್ಯಾಮಂಡಳ ವಿಭಾಗದಿಂದ ಅನುಮೋದನೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| 27 | 2025/09/ II | 2025-26 ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿರುವ ಇಂಗ್ಲೀಷ ವಿಭಾಗಕ್ಕೆ ಪ್ರವೇಶಾತಿ ವಿಷಯ ಕುರಿತು. |
| | ತೀರ್ಮಾನ | **ವಿಜಯಪುರದ ಡಾ. ಫ.ಗು. ಹಳಕಟ್ಟಿ ಸ್ನಾತಕೋತ್ತರ ಕೇಂದ್ರದಲ್ಲಿ ಸ್ನಾತಕೋತ್ತರ ಇಂಗ್ಲೀಷ ಕೋರ್ಸನ್ನು ವಿದ್ಯಾರ್ಥಿಗಳ ಹಿತದೃಷಿಯಿಂದ ಪುನಃ ಪ್ರಾರಂಭಿಸಲು 2025-26ನೇ ಶೈಕ್ಷಣಿಕ ಸಾಲಿನಲ್ಲಿ 40 ಪ್ರವೇಶ ಮಿತಿಯೊಂದಿಗೆ ದಿನಾಂಕ: 18.07.2025 ರಂದು ಪುನಃ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಂತೆ ಆದೇಶಿಸಲಾಗಿತ್ತು. ಮುಂದುವರೆದು, 2025-26 ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಇಂಗ್ಲೀಷ ವಿಭಾಗಕ್ಕೆ ಕೇವಲ್ 8 ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿಯನ್ನು ಪಡೆದಿರುವುದರಿಂದ ಸದರಿ ವಿದ್ಯಾರ್ಥಿಗಳನ್ನು ಬಿ.ಎಲ್.ಡಿ.ಇ ಸಂಸ್ಥೆಗೆ ವರ್ಗಾಯಿಸಲು ಹಾಗೂ ಪ್ರಸ್ತುತ ಸ್ನಾತಕೋತ್ತರ ಕೇಂದ್ರ, ವಿಜಯಪುರದ ಇಂಗ್ಲೀಷ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರನ್ನು ಮರಳಿ ವಿಶ್ವವಿದ್ಯಾಲಯ ಅಥವಾ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಕ್ಕೆ ವರ್ಗಾಯಿಸಲು ಸಭೆಯು ತೀರ್ಮಾನಿಸಿತು.** |
| 28 | 2025/09/ III | PM USHA(MERU) ಯೋಜನೆಯಡಿ ಮಂಜೂರಾದ ಉಪಕರಣಗಳಲ್ಲಿ, ಅನಗತ್ಯವೆಂದು ಪರಿಗಣಿಸಲಾದ ಉಪಕರಣಗಳ ಬದಲಾವಣೆಯನ್ನು ಮಾಡಿ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್. ಬೆಂಗಳೂರು, ರವರಲ್ಲಿ ಸಲ್ಲಿಸಿದ ವರದಿಗೆ ಅನುಸಮರ್ಥನೆಯ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ PM USHA(MERU) ಯೋಜನೆಯಡಿ 100 ಕೋಟಿ ಅನುದಾನ ಮಂಜೂರಾಗಿರುತ್ತದೆ. ಸದರಿ ಯೋಜನೆಯ ಡಿ.ಪಿ.ಆರ್‌ನಲ್ಲಿ New Construction, Renovation, Equipment ಮತ್ತು Soft Component ಎಂಬ 04 Component ಗಳಿಗೆ ಅನುದಾನವನ್ನು ಉಪಯೋಗಿಸಬೇಕಾಗಿರುತ್ತದೆ ಹಾಗೂ ಇವುಗಳಿಗೆ ಕರ್ನಾಟಕ ಸರಕಾರದ ಸಚಿವ ಸಂಪುಟ ಸಭೆಯ ಅನುಮೋದನೆ ದೊರಕಿರುತ್ತದೆ. ಪ್ರಸ್ತುತ ಯೋಜನೆಯು ಮಂಜೂರಾದ ನಂತರ ಅನುಮೋದಿತ ಡಿ.ಪಿ.ಆರ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಡುವಂತೆ ವಿಶ್ವವಿದ್ಯಾಲಯದಿಂದ ಹಲವು ಮನವಿಗಳನ್ನು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್‌ಗೆ ಸಲ್ಲಿಸಲಾಗಿತ್ತು.<br>ದಿನಾಂಕ 15.07.2025 ರಂದು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ರವರು ವಿಶ್ವವಿದ್ಯಾಲಯಗಳಿಗೆ PM USHA(MERU) ಯೋಜನೆಯಲ್ಲಿ ಸಲ್ಲಿಕೆಯಾಗಿರುವ ಡಿ.ಪಿ.ಆರ್.ನಲ್ಲಿ ಬದಲಾವಣೆಗಳ ವಿವರಗಳನ್ನು ಸಲ್ಲಿಸುವಂತೆ ಪತ್ರದ ಮೂಲಕ ತಿಳಿಸಿರುತ್ತಾರೆ. ಹೀಗಾಗಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, End-User ವಿಭಾಗಗಳಿಂದ Equipment ಗಳ ಬದಲಾವಣೆಯ ಕುರಿತು ಪತ್ರ ಪಡೆಯಲಾಗಿದೆ. ಅನಗತ್ಯ ಉಪಕರಣಗಳನ್ನು ಕೈಬಿಟ್ಟು, ಅವಶ್ಯಕ ಉಪಕರಣಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ. ಉಪಕರಣಗಳ ಗುಣಮಟ್ಟಗಳಿಗೆ ತಕ್ಕಂತೆ ದರಗಳನ್ನು ಪರಿಷ್ಕರಿಸಿಕೊಳ್ಳಲಾಗಿದೆ. ಸದರಿ ಪರಿಷ್ಕೃತ ವರದಿಯನ್ನು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ರವರಿಗೆ ಸಲ್ಲಿಸಲಾಗಿದೆ. ಆದ್ದರಿಂದ, ಪರಿಷ್ಕೃತ** |

| | | |
|---|---|---|
| | | **ಡಿ.ಪಿ.ಆರ್‌ಗೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು ಹಾಗೂ ಪರಿಷ್ಕೃತ ಪಟ್ಟಿಯಂತೆ ಉಪಕರಣಗಳ ಖರೀದಿ ಪ್ರಕ್ರಿಯೆ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 29 | 2025/09/ IV | 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಶೇ. 50% ಕ್ಕಿಂತ ಕಡಿಮೆ ಮೌಲ್ಯಾಂಕ ಪಡೆದ ಮಹಾವಿದ್ಯಾಲಯಗಳ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ವಾಸ್ತವ ಸ್ಥಿತಿ ಕುರಿತಂತೆ ಸಮಿತಿಗಳು ಸಲ್ಲಿಸಿರುವ ವರದಿಗಳ ಕುರಿತು |
| | **ತೀರ್ಮಾನ** | **ಮುಂದೂಡಲಾಯಿತು.** |
| 30 | 2025/09/V | NoC ಪಡೆದು ಬೇರೆ ವಿಶ್ವವಿದ್ಯಾಲಯಗಳಿಗೆ ವರ್ಗಾವಣೆಯಾದ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರುಗಳ ಅಡಿಯಲ್ಲಿ ಪಿಎಚ್.ಡಿ. ಅಧ್ಯಯನ ನಡೆಸುತ್ತಿರುವ ಸಂಶೋಧನಾರ್ಥಿಗಳನ್ನು ಬೇರೆ ಮಾರ್ಗದರ್ಶಕರಿಗೆ ಹಂಚಿಕೆ ಮಾಡುವ ಕುರಿತು C |
| | **ತೀರ್ಮಾನ** | **ಮುಂದೂಡಲಾಯಿತು** |
| 31 | 2025/09/VI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Regulations governing Lateral entry to the scheme of CBSC and NEP under graduate degree programmes for RCU, Belagavi ತಿದ್ದುಪಡಿ ಮಾಡಿರುವ ಕರಡು ನಿಯಮವನ್ನು ಅನುಮೋದಿಸುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Non-CBCS ಹಾಗೂ CBCS ಪಠ್ಯಕ್ರಮದಿಂದ NEP ಪಠ್ಯಕ್ರಮಕ್ಕೆ ಮರುಪ್ರವೇಶ ಪಡೆದ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು UUCMS ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ. ಮುಂಬರುವ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪದವಿ ಪ್ರಧಾನ ಮಾಡಬೇಕಾಗಿರುವುದರಿಂದ, ಫಲಿತಾಂಶ ನೀಡುವ ಕುರಿತು ಸಮನ್ವಯ ಸಮಿತಿಯ ಶಿಫಾರಸ್ಸಗಳನ್ನು ಅಳವಡಿಸಿಕೊಂಡು Regulations governing Lateral entry to the scheme of CBSC and NEP under graduate degree programmes for RCU, Belagavi ಕರಡು ನಿಯಮಾವಳಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಸೂಚನೆಯ ಮೇರೆಗೆ ತಿದ್ದುಪಡಿಸಿ ಸೂಕ್ತ ಬದಲಾವಣೆ ಮಾಡಿಕೊಳ್ಳಲಾಗಿದೆ. ಸದರಿ ಕರಡು ನಿಯಮವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |
| 32 | 2025/09/ VII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 14 ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ಬಯಸಿ ಅರ್ಜಿ ಸಲ್ಲಿಸಿದ ಸಾಧಕರ ಹೆಸರುಗಳನ್ನು ಗೌರವಾನ್ವಿತ ರಾಜ್ಯಪಾಲರಿಂದ ನೇಮಕಗೊಂಡ ಸಮಿತಿಯ ಪರಿಶೀಲನೆಗೆ ನೀಡುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 14 ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ಗೆ ಅರ್ಜಿ ಸಲ್ಲಿಸಿದ ಸಾಧಕರ ಹೆಸರುಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಮುಂದಿನ ಕ್ರಮಕ್ಕಾಗಿ ಗೌರವಾನ್ವಿತ ರಾಜ್ಯಪಾಲರಿಂದ ನೇಮಕಗೊಂಡ ಸಮಿತಿಯ ಪರಿಶೀಲನೆಗೆ ಸಲ್ಲಿಸಲು ಸೂಚಿಸಿತು.** |
| 33 | 2025/09/ VIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಜರುಗಿದ ವಾರ್ಷಿಕ ಘಟಿಕೋತ್ಸವಗಳ ಮುಖ್ಯ ಅತಿಥಿಗಳ ಭಾಷಣಗಳ ಪ್ರತಿ ಮತ್ತು ಗೌರವ ಡಾಕ್ಟರೇಟ್‌ಗೆ ಭಾಜನರಾದ ರತ್ನಗಳ ಸಂಗ್ರಹದ ಪುಸ್ತಕ ಮುದ್ರಣದ ಅನುಮೋದನೆ ಕುರಿತು |

| | | |
|---|---|---|
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಇಲ್ಲಿಯವರೆಗೆ ನಡೆದ 1 ರಿಂದ 13 ರವರೆಗಿನ ವಾರ್ಷಿಕ ಘಟಿಕೋತ್ಸವಗಳು ಹಾಗೂ ಪ್ರಸ್ತುತ ಜರುಗಲಿರುವ 14 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲಿರುವ ಮುಖ್ಯ ಅತಿಥಿಗಳ ಭಾಷಣ ಹಾಗೂ ಗೌರವ ಡಾಕ್ಟರೇಟ್ ಪುರಸ್ಕೃತ ರತ್ನಗಳ ವಿವರಗಳನ್ನೊಳಗೊಂಡ ಮಾಹಿತಿಯನ್ನು(14 ಮುಖ್ಯ ಅತಿಥಿಗಳ ಭಾಷಣಗಳ ಪ್ರತಿ ಮತ್ತು 44 ಗೌರವ ಡಾಕ್ಟರೇಟ್ ಪುರಸ್ಕೃತರು) ಸಂಗ್ರಹಿಸಿ ಪುಸ್ತಕವನ್ನು ಮುದ್ರಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| 34 | 2025/09/ XI | ಸಿಂಡಿಕೇಟ್ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ Construction of Central Research Block, Adhyayana Peeta and Languages Block in the premises of Rani Channamma University at Hirebagewadi, Belagavi district, Karnataka ಕಾಮಗಾರಿಯ ವಿನ್ಯಾಸದಲ್ಲಿನ ಬದಲಾವಣೆ ಮಾಡುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ನೂತನ ಆವರಣ ಹಿರೇಬಾಗೇವಾಡಿಯಲ್ಲಿ PM-USHA(MERU) ಅಡಿಯಲ್ಲಿ Construction of Central Research Block, Adhyayana Peeta and and Languages Block in the premises of Rani Channamma University at Hirebagewadi, Belagavi district, Karnataka ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಇದರೊಂದಿಗೆ PM-USHA(MERU) ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಯೋಗಾಲಯಗಳಿಗೆ ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳನ್ನು ಸಹ ಖರೀದಿಸಲಾಗುತ್ತಿದೆ.**<br><br>**ಪ್ರಸ್ತುತ ಸದರಿ ಪ್ರಯೋಗಾಲಯಗಳ ವೈಜ್ಞಾನಿಕ (Scientific) ಉಪಕರಣಗಳನ್ನು Research Block ನಲ್ಲಿ ಇರಿಸಬೇಕಾಗಿದ್ದು, ಈ ಕುರಿತು IISc ಯ ಪ್ರಾಧ್ಯಾಪಕರು ಹಾಗೂ ವಿಜ್ಞಾನ ಉಪಕರಣಗಳ ಸರಬರಾಜುದಾರರಿಂದ ಅಭಿಪ್ರಾಯವನ್ನು ಪಡೆಯಲಾಗಿದ್ದು, ಉಪಕರಣಗಳಿಗೆ ತಕ್ಕಂತೆ ಕಟ್ಟಡದ ವಿನ್ಯಾಸದ ಅವಶ್ಯಕತೆಯ ಕುರಿತು ತಿಳಿಸಿರುತ್ತಾರೆ. ಅದರಂತೆ ಪ್ರಸ್ತುತ ಇರುವ ಕಟ್ಟಡದ ವಿನ್ಯಾಸವನ್ನು PWD-PRAMC, ಬೆಂಗಳೂರು ಇವರಿಗೆ ಸಲ್ಲಿಸಿ, ಕಟ್ಟಡಗಳ ವಿನ್ಯಾಸವನ್ನು ಪರಿಷ್ಕರಿಸಿ ಉಂಟಾಗುವ ಬದಲಾವಣೆಯ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ತಿಳಿಸಲು ಸಭೆಯು ಅನುಮೋದನೆ ನೀಡಿತು.** |
| 35 | 2025/09/ XII | ಸಿಂಡಿಕೇಟ್ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ನೂತನ ಆವರಣಕ್ಕೆ ಗ್ರಾಮದ ಸ್ಥಳೀಯ ರೈತರುಗಳು ಹೊಲದಲ್ಲಿನ ಎರಡು ಬೋರವೆಲಗಳಿಂದ ನೀರು ಸರಬರಾಜು ಪಡೆಯುವ ಕುರಿತು. |
| | ತೀರ್ಮಾನ | **ಮಾರ್ಚ್-2026 ರ ಒಳಗಾಗಿ ವಿಶ್ವವಿದ್ಯಾಲಯವನ್ನು ನೂತನ ಆವರಣಕ್ಕೆ ಸ್ಥಳಾಂತರಗೊಳಿಸಲು ಯೋಜಿಸಲಾಗಿದೆ. ಹಾಗೂ ಪ್ರಸ್ತುತ ಕಟ್ಟಡ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, ನೀರಿನ ಅಭಾವ ಉಂಟಾಗುತ್ತಿದೆ. ಕಾರಣ, ನೂತನ ಆವರಣದ ಆಡಳಿತ ಕಟ್ಟಡ ಮತ್ತು ಪರೀಕ್ಷಾ ಕಟ್ಟಡದ ಮಧ್ಯೆದಲ್ಲಿ ತಗ್ಗು ಪ್ರದೇಶವಿದ್ದು 5 ಲಕ್ಷ ರೂಪಾಯಿದಲ್ಲಿ ಸಂಪ್ ಮಾಡಿಕೊಳ್ಳುವುದು ಹಾಗೂ ಅಲ್ಲಿ Over Head Tank ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಸದರಿ Over Head Tank ನಲ್ಲಿ ನೀರನ್ನು ಭರಿಸುವ ಕುರಿತಂತೆ ವಿವಿಧ ಹಂತಗಳನ್ನು ಕುಲಸಚಿವರು ನಕ್ಷೆಯ ಮೂಲಕ ಸಭೆಗೆ** |

| | | |
|---|---|---|
| | | ವಿವರಿಸಿದರು ಹಾಗೂ ತಗಲುವ ವೆಚ್ಚದ ಕುರಿತು ಮಾಹಿತಿ ನೀಡಿದರು.<br>ಸಮೀಪದ ಹೊಲದಲ್ಲಿಯ ಬೋರವೆಲ್‌ಗಳಿಂದ ನೀರು ಉಪಯೋಗಿಸುವ ಕುರಿತು ಶ್ರೀ ಉಳವಪ್ಪ ನಂದಿ ಎಂಬುವವರಿಗೆ ದಿನಾಂಕ: 1.8.2025 ರಂದು ವಿಶ್ವವಿದ್ಯಾಲಯದಿಂದ ಎರಡು ಬೋರವೇಲ್‌ಗಳ ಮೂಲಕ ನೀರು ಸರಬರಾಜು ಪಡೆಯಲು ಪತ್ರವನ್ನು ಕಳುಹಿಸಲಾಗಿತ್ತು. ಅದರಂತೆ, ದಿನಾಂಕ: 8.8.2025 ರಂದು ಸದರಿ ರೈತರು ಒಪ್ಪಿಗೆಯನ್ನು ಸೂಚಿಸಿ ವಿಶ್ವವಿದ್ಯಾಲಯಕ್ಕೆ ಪತ್ರವನ್ನು ಬರೆದಿರುತ್ತಾರೆ. ವಿಶ್ವವಿದ್ಯಾಲಯದ ಆವರಣಕ್ಕೆ ಪ್ರತಿ ದಿನ 0.25 MLD ಅಷ್ಟು ನೀರಿನ ಅವಶ್ಯಕತೆಯಿದ್ದು, ಎರಡು ಬೋರವೆಲ್‌ಗಳಿರುವುದರಿಂದ ಪ್ರತಿ ಬೋರವೆಲ್‌ನಿಂದ 0.12 mld ನೀರಿನ ಸರಬರಾಜು ಪಡೆದುಕೊಳ್ಳುವ ಕುರಿತು ರೈತರಿಗೆ ತಿಳಿಸಿ, ಮಾಸಿಕ ಬಾಡಿಗೆ ಮೊತ್ತದ ಕುರಿತು ರೈತರೊಂದಿಗೆ ಚರ್ಚಿಸಿ ಪ್ರತಿ ತಿಂಗಳು ರೂ.12000/- ಗಳನ್ನು ಪಾವತಿಸಲು ಹಾಗೂ ಪ್ರತಿ ವರ್ಷ 5% ಬಾಡಿಗೆಯನ್ನು ಹೆಚ್ಚಿಸಲು ಮತ್ತು ರೈತರಾದ ಶ್ರೀ ಉಳವಪ್ಪ ನಂದಿ ಹಾಗೂ ಶ್ರೀ ಆನಂದ ನಂದಿ ಇವರುಗಳೊಂದಿಗೆ ಕರಾರು ಒಪ್ಪಂದ(15 ವರ್ಷಕ್ಕೆ) ಮಾಡಿಕೊಳ್ಳಲು ಕುಲಸಚಿವರು, ಸಭೆಯ ಅನುಮೋದನೆ ಕೋರಿದ ಹಿನ್ನಲೆಯಲ್ಲಿ, ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.<br>ಮುಂದುವರೆದು, ಒಂದು ವೇಳೆ ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ಶಾಶ್ವತ ನೀರಿನ ಸೌಲಭ್ಯ ಪಡೆದುಕೊಂಡರೆ ತಕ್ಷಣವೇ ಈ ಒಪ್ಪಂದ ರದ್ದುಪಡಿಸಿಕೊಳ್ಳಲು ವಿಶ್ವವಿದ್ಯಾಲಯದ ಷರತ್ತಿಗೆ ಹಾಗೂ ವಿಶ್ವವಿದ್ಯಾಲಯ ಮುಂದೇ ಯಾವುದೇ ಸಂದರ್ಭದಲ್ಲಿ ಒಪ್ಪಂದ ರದ್ದುಪಡಿಸಿಕೊಂಡಲ್ಲಿ ಬೊರವೆಲ್, ಪಂಪಸೆಟ್, ವಿದ್ಯುತ್ ಉಪಕರಣಗಳು, ಸಂಪೂರ್ಣ ಪೈಪಲೈನ್ ಎಲ್ಲಾ ಆಸ್ತಿಗಳನ್ನು ವಿಶ್ವವಿದ್ಯಾಲಯದ ಸುಪರ್ದಿಗೆ ತೆಗೆದುಕೊಂಡು ಬಳಸಿಕೊಳ್ಳಲು ಯಾವುದೇ ತಕರಾರು ಮಾಡದಿರುವ ಷರತ್ತಿಗೆ ಸಭೆಯು ಅನುಮೋದಿಸಿತು.<br>ಮುಂದುವರೆದು, ಗ್ರಾಮದ ಸ್ಥಳೀಯ ರೈತರುಗಳ ಹೊಲದಲ್ಲಿನ ಎರಡು ಬೋರವೆಲಗಳಿಂದ ನೀರು ಸರಬರಾಜು ಪಡೆಯುವ ಕುರಿತಂತೆ, ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ನಿವಾಸಿ ಅಭಿಯಂತರರು, ಕಟ್ಟಡ ವಿಭಾಗ, ಉಪಕುಲಸಚಿವರು, ಆಡಳಿತ ವಿಭಾಗ, ಮತ್ತು ಸಹಾಯಕ ಕುಲಸಚಿವರುಗಳು, ಕಟ್ಟಡ ವಿಭಾಗ ಮತ್ತು ರೈತರುಗಳನ್ನು ಒಳಗೊಂಡು ದಿನಾಂಕ: 26.09.2025 ರಂದು ಸಭೆಯನ್ನು ಆಯೋಜಿಸಲಾಗಿದ್ದು, ಸದರಿ ಸಭೆಯ ನಡಾವಳಿ ಮತ್ತು ಕರಾರು ಒಪ್ಪಂದಕ್ಕೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು |
| 36 | 2025/09/ XII | ಸದಸ್ಯರಾದ ಶ್ರೀ ರಫಿ ಭಂಡಾರಿ ಇವರು ವಿಶ್ವವಿದ್ಯಾಲಯದಲ್ಲಿ Work Book ಜಾರಿಗೊಳಿಸುವ ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಶೀಲಿಸಲು ಎಲ್ಲ ಸದಸ್ಯರುಗಳಿಗೆ ಮನವಿ ಮಾಡಿದರು. |
| 37 | 2025/09/ XIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೀರೆಬಾಗೇವಾಡಿ ಹೊಸ ಆವರಣದಲ್ಲಿ ಪಿ.ಎಂ-ಉಷಾ(ಮೇರು) ವಿವಿಧ ಕಟ್ಟಡಗಳ ಹಾಗೂ ರಾಷ್ಟ್ರೀಯ ಹೆದ್ದಾರಿಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗಳ ಸ್ಥಳದಲ್ಲಿ ಇಡಲಾಗುವ ಶಿಲೆಗಳ ಕೆತ್ತನೆಯಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರುಗಳನ್ನು ಉಲ್ಲೇಖಿಸಲು ಸಭೆಯು ತೀರ್ಮಾನಿಸಿತು. |

| | | |
|---|---|---|
| 38 | 2025/09/ XIV | **E-vidya App ನಲ್ಲಿ ಅಪಲೋಡ್ ಮಾಡಲಾದ ವಿವಿಧ ವಿಷಯಗಳ ವಿಡಿಯೋಗಳನ್ನು ಅಭಿವೃದ್ಧಿಗೊಳಿಸಿ ಸಭೆಗೆ ಮರು ಪ್ರಸ್ತುತಪಡಿಸಲಾಯಿತು. ಸಂಬಂಧಿಸಿದ ಲಿಂಕನ್ನು ಎಲ್ಲ ಸದಸ್ಯರುಗಳಿಗೆ ಸಲ್ಲಿಸುವುದು, ಪರಿಶೀಲಿಸಿದ ನಂತರ ಯಾವುದೇ ಅಗತ್ಯ ಬದಲಾವಣೆಗಳಿದ್ದರೆ ಅದರನ್ವಯ ಗುಣಮಟ್ಟವನ್ನು ಯಾವಾಗಲು ಉತ್ಕೃಷ್ಟವಾಗಿರುವಂತೆ ನೋಡಿಕೊಳ್ಳಲು ಸಭೆ ಸೂಚಿಸಿತು.** |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ - 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-USHA (MERU)

E-mail: registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website: www.rcub.ac.in

Phone No.: 0831-2565234


ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2025-26/ 3831

ದಿನಾಂಕ: 8 OCT 2025

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 30-09-2025 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭೆ ನಡೆದ ದಿನಾಂಕ : 30-09-2025

ದಿನಾಂಕ : 30-09-2025 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 09-10-2025ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ಸಲ್ಲಿಸಲು ಕೋರಿದೆ.

ಯಾವುದೇ ವಿಷಯದ ಅಸಹಮತಿಯ, ಲಿಖಿತ ಟಿಪ್ಪಣಿ ನಿಗಧಿತ ಸಮಯದಲ್ಲಿ ಸ್ವೀಕರಿಸದೇ ಇದ್ದಲ್ಲಿ, ಎಲ್ಲಾ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಿ, ಮುಂದಿನ ಕ್ರಮ ಜರುಗಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಂತೋಷ ಕಾಮಗೌಡ ಕೆ.ಎ.ಎಸ್.
ಕುಲಸಚಿವರು